**OS No**: 37/2018 **P.W**: 1

## ದಿನಾಂಕ : 30.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ ಎ.ಜಿ.ಪಿ. ವಕೀಲರಿಂದಃ-**

ದಾವಾ ಆಸ್ತಿ ನನಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಮೂಲತಹ ದಾವಾ ಆಸ್ತಿ ನನ್ನ ತಾತ ಬ್ಯಾಟಪ್ಪ ಬಿನ್ ಬ್ಯಾಟಪ್ಪ ಅವರ ಹೆಸರಿನಲ್ಲಿ ಇತ್ತು. ನನ್ನ ತಾತನ ಹೆಸರಿನಲ್ಲಿ ಹೊಳೆನರಸೀಪುರದ ದಕ್ಷಿಣನಾಲೆಯ ಸರ್ವೆ ನಂಬರ್ 115 ರಲ್ಲಿ 6 ಗುಂಟೆ ಜಮೀನು ಹಾಗೂ ಸರ್ವೆ ನಂಬರ್ 213/1 ರಲ್ಲಿ 8 ಗುಂಟೆ, ಸರ್ವೆ ನಂಬರ್ 213/3 ರಲ್ಲಿ 14 ಗುಂಟೆ ಆಸ್ತಿ ಇದ್ದವು. ನನ್ನ ತಾತ ಬ್ಯಾಟಪ್ಪನಿಗೆ ಸಣ್ಣಪ್ಪ ಎಂಬ ಇನ್ನೊಬ್ಬ ಸಹೋದರ ಇದ್ದ. ಸರ್ವೆ ನಂಬರ್. 115 ರಲ್ಲಿ ನನ್ನ ತಾತ ಬ್ಯಾಟಪ್ಪನ ತಮ್ಮ ಸಣ್ಣಪ್ಪನಿಗೆ ಒಂದು ಹಿಸ್ಸೆ ಹೋಗಿರುತ್ತದೆ, ಎಷ್ಟು ಗುಂಟೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಬ್ಯಾಟಪ್ಪನಿಗೆ ಒಟ್ಟು 5 ಜನ ಮಕ್ಕಳು, ಅವರ ಹೆಸರುಗಳೆಂದರೆ ಮಂಜುನಾಥ, ಕೃಷ್ಣ, ಸುರೇಶ್,ಗಾಯಿತ್ರಿ ಮತ್ತು ಪದ್ಮ.

ದಾವಾ ಆಸ್ತಿಯು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿ. ದಾವಾ ಆಸ್ತಿ ನನ್ನ ತಂದೆ ಪಿತ್ರಾರ್ಜಿತ ಆಸ್ತಿ ಅಲ್ಲ, ಅದು ಎಲ್.ಆರ್.ಎಫ್. 140/1974 ರ ಮೂಲಕ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಖಾತೆ ನನ್ನ ಹೆಸರಿಗೆ ಬಂದಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ದಾವಾ ಆಸ್ತಿ ಸ್ವಾಧೀನಪಡಿಸಿಕೊಂಡ ಬಗ್ಗೆ ನಮಗೆ ಪರಿಹಾರ ಕೊಡಿ ಎಂದು ನಾನು ಎಸ್.ಎಲ್.ಓ. ಕಚೇರಿಗೆ ಅರ್ಜಿಯನ್ನು ಕೊಟ್ಟಿರುತ್ತೇನೆ. ಸರ್ಕಾರ ದಾವಾ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡ ಬಗ್ಗೆ ನನಗೆ ಯಾವುದೇ ನೋಟಿಸ್ ಬಂದಿರುವುದಿಲ್ಲ. 1984 ನೇ ಇಸವಿಯಲ್ಲಿ ದಾವಾ ಆಸ್ತಿ ನನ್ನ ತಂದೆಯ ಹೆಸರಿನಲ್ಲಿ ಇತ್ತು. 1985 ನೇ ಇಸವಿಯಲ್ಲೂ ಸಹಾ ದಾವಾ ಆಸ್ತಿ ನನ್ನ ತಂದೆ ಹೆಸರಿನಲ್ಲಿ ಇತ್ತು. ನನ್ನ ದಾವಾ ಆಸ್ತಿಗಳು ಭೂ ಸ್ವಾಧೀನವಾಗಿ ಅವಾರ್ಡ್ ನೋಟಿಸ್ ಅನ್ನು ಸರ್ಕಾರದವರು ನನ್ನ ತಂದೆಗೆ ಕಳುಹಿಸಿ ಪರಿಹಾರದ ಹಣವನ್ನು ಪಡೆದುಕೊಳ್ಳುವಂತೆ ನೋಟಿಸ್ ನೀಡಿದರೂ ಸಹಾ ನಾನು ಅದನ್ನು ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ಇವತ್ತಿಗೂ ಸಹಾ ಪರಿಹಾರದ ಹಣ ನಮ್ಮ ಹೆಸರಿನಲ್ಲಿ ಸಂಬಂಧಪಟ್ಟ ಕಚೇರಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

**OS No**: 37/2018 **P.W**: 1

ದಾವಾ ಆಸ್ತಿ ಭೂ ಸ್ವಾಧೀನವಾದ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ವಿನಾ ಕಾರಣ 1 ರಿಂದ 3 ಪ್ರತಿವಾದಿಯರಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ಈ ದಾವೆ ತಂದಿರುತ್ತೇನೆ ಎಂದರೆ ಸರಿಯಲ್ಲ. ಈಗಲೂ ಸಹಾ ಭೂ ಸ್ವಾಧೀನ ಅಧಿಕಾರಿಗಳು ಈಗಾಗಲೇ ನಿಗದಿಪಡಿಸಿದ ಪರಿಹಾರದ ಹಣವನ್ನು ಕೊಡಲು ತಯಾರಿರುತ್ತಾರೆ ಎಂದರೆ ಸಾಕ್ಷಿ ಆ ಹಣ ತುಂಬಾ ಕಡಿಮೆ ಆಗಿದ್ದು, ಈಗಿನ ಮಾರುಕಟ್ಟೆ ಬೆಲೆಗೆ ಅನುಗುಣವಾಗಿ ಪರಿಹಾರ ಕೊಡುವುದಾದರೆ ನಾನು ಸ್ವೀಕರಿಸುತ್ತೇನೆ ಎಂದು ನುಡಿಯುತ್ತಾರೆ.

ನಾನು ಹೊಳೆನರಸೀಪುರದಲ್ಲಿ 40 ವರ್ಷಗಳಿಂದ ವಾಸವಾಗಿದ್ದೇನೆ. ನಾನು ವ್ಯವಸಾಯ ಮಾಡುತ್ತೇನೆ. ನಾನು 8 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಈಗ 44 ವರ್ಷ ವಯಸ್ಸು. ದಾವಾ ಆಸ್ತಿಯ ಖಾತೆ ನನ್ನ ಹೆಸರಿಗೆ 1995 ನೇ ಇಸವಿಯಲ್ಲಿ ಆಗಿರುತ್ತದೆ. 1995 ನೇ ಇಸವಿಯಲ್ಲಿಯೇ ಕಾಂಪೌಂಡ್ ಅನ್ನು ಕಟ್ಟಿರುತ್ತಾರೆ ಎಂದರೆ ಸಾಕ್ಷಿ ಇಲ್ಲಾ ಈ ಕೇಸ್ ಹಾಕುವ ಸಮಯಕ್ಕೆ ಕಾಲೇಜ್‌ನವರು ಕಾಂಪೌಂಡ್ ಕಟ್ಟುತ್ತಿದ್ದರು ಅದಕ್ಕೆ ನಾನು ತಕರಾರು ಮಾಡಿ ಈ ದಾವೆಯನ್ನು ಹಾಕಿರುತ್ತೇನೆ. ಕಾಲೇಜ್ ಅನ್ನು ಯಾವಾಗ ಕಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಎಲ್ಲಾ ವಿಷಯ ಗೊತ್ತಿದ್ದು, ಸುಮಾರು 25 ವರ್ಷಗಳ ಹಿಂದೆ ಕಾಲೇಜು ಮತ್ತು ಕಾಂಪೌಂಡ್ ಅನ್ನು ಕಟ್ಟಿದ್ದರು ಸಹಾ ಈಗ ಹೆಚ್ಚಿನ ಪರಿಹಾರ ಪಡೆಯಬೇಕು ಎನ್ನುವ ಉದ್ದೇಶದಿಂದ ನ್ಯಾಯಾಲಯಕ್ಕೆ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರು
ಹೊಳೆನರಸೀಪುರ.